Online Newspaper Clipping Service
**Dated, Wednesday 25th January – 2017**

THE TIMES OF INDIA

**Pg.No.09**

# UGC caps age limit for candidates taking NEET at 25

Hemali.Chhapia
@timesgroup.com

**Mumbai:** Medical aspirants across India can now only take three shots at cracking the National Eligibility cum Entrance Test, a cap introduced to discourage thousands of 'Munnabhais' who keep trying their luck at the medical entrance test. Also, now the candidates must be below 25 years of age if they want to take the medical and dental exam.

During a University Grants Commission meeting in Delhi on Tuesday, it was decided that the minimum age for NEET candidates will be 17 and the maximum 25. The cap on age for students from the reserved category will be 30. Till date, there has neither been a maximum age defined to take the NEET nor a limit on the number of attempts. "This is a good decision," said Dr Pravin Shingare, director of the directorate of medical education and research.

**NEW NEET RULES**

"When they don't make the cut, some students join a BSc college and then every year, keep taking the medical embrace test," he added. In fact, the rule will also bar faculty of coaching classes who perpetually take the test to understand the altering pattern of the exam. The NEET information brochures that contain this information and will be disbursed soon.

# ಗ್ರಾಮೀಣ ವೈದ್ಯ ಸೇವೆ: ಸೀಟು ಹಂಚಿಕೆ ಮುನ್ನ ಷರತ್ತು

**ವಿಕ ಸುದ್ದಿಲೋಕ** ಬೆಂಗಳೂರು

ಗ್ರಾಮೀಣ ಪ್ರದೇಶದ ವೈದ್ಯರ ಕೊರತೆ ನೀಗಿಸಲು, ವೈದ್ಯಕೀಯ ಕೋರ್ಸ್‌ಗೆ ಸರಕಾರಿ ಕೋಟಾದ ಸೀಟು ನೀಡುವ ಮೊದಲೇ ಒಂದು ವರ್ಷ ಗ್ರಾಮಾಂತರ ಸೇವೆ ಕಡ್ಡಾಯದ ಎಂಬ ಷರತ್ತು ವಿಧಿಸುವ ಬಗ್ಗೆ ರಾಜ್ಯ ಸರಕಾರ ಚಿಂತನೆ ನಡೆಸಿದೆ.

ವೈದ್ಯರಿಗೆ ಗ್ರಾಮೀಣ ಸೇವೆ ಕಡ್ಡಾಯ ಪ್ರಶ್ನಿಸಿ ಬಿ.ಎ.ಅಲೀಂ ಮತ್ತಿತರ ನೂರಾರು ಮಂದಿ ವೈದ್ಯರು ಸಲ್ಲಿಸಿರುವ ಅರ್ಜಿಗಳ ವಿಚಾರಣೆ ನಡೆಸುತ್ತಿರುವ ನ್ಯಾ.ಎಲ್.ನಾರಾಯಣಸ್ವಾಮಿ ಅವರಿದ್ದ ಏಕಸದಸ್ಯಪೀಠದ ಮುಂದೆ ಹೆಚ್ಚುವರಿ ಅಡ್ವೊಕೇಟ್ ಜನರಲ್ ಎ.ಎಸ್.ಪೊನ್ನಣ್ಣ ಮಂಗಳವಾರ ಈ ವಿಷಯ ತಿಳಿಸಿದರು.

''ಸರಕಾರಿ ಕೋಟಾದಲ್ಲಿ ವೈದ್ಯ ಪದವಿ, ಸ್ನಾತಕೋತ್ತರ ವೈದ್ಯ ಕೋರ್ಸ್ ಸೇರುವವರಿಗೆ ಸೀಟು ಆಯ್ಕೆಗೆ ಮುನ್ನವೇ ಷರತ್ತು ವಿಧಿಸುವ ಬಗ್ಗೆ ಚಿಂತನೆ ನಡೆಸಲಾಗುತ್ತಿದೆ. ಈ ಕುರಿತು ಸಮಗ್ರ ಶಾಸನ ರೂಪಿಸುವ ಸಂಬಂಧ ಇತ್ತೀಚೆಗೆ ಆರೋಗ್ಯ ಸಚಿವರು ಇತರೆ ಇಲಾಖೆಗೆ ಮುಖ್ಯಸ್ಥರ ಜೊತೆ ಸಭೆ ನಡೆಸಿದ್ದಾರೆ. ಇನ್ನೊಂದು ಸುತ್ತಿನ ಸಭೆ ನಡೆಸಿ ಸ್ಪಷ್ಟ ತೀರ್ಮಾನ ಕೈಗೊಳ್ಳಲು ಎರಡು ವಾರ ಕಾಲಾವಕಾಶ ನೀಡಬೇಕು'' ಎಂದು ನ್ಯಾಯಪೀಠಕ್ಕೆ ತಿಳಿಸಿದರು. ಎಜಿ ಹೇಳಿಕೆ ಆಲಿಸಿದ ನ್ಯಾಯಪೀಠ ವಿಚಾರಣೆಯನ್ನು ಎರಡು ವಾರ ಮುಂದೂಡಿತು.

ಉದಯವಾಣಿ



## ■ ಯುಜಿಸಿ ಅರ್ಹತಾ ಪರೀಕ್ಷೆಗೆ ಯೋಗ ಸೇರ್ಪಡೆ

ನವದೆಹಲಿ: ಉಪನ್ಯಾಸಕರಾಗಲು ಅರ್ಹತೆ ಗಳಿಸುವ ವಿಶ್ವವಿದ್ಯಾನಿಲಯ ಧನ ಸಹಾಯ ಆಯೋಗ ನಡೆಸುವ ರಾಷ್ಟ್ರೀಯ ಅರ್ಹತಾ ಪರೀಕ್ಷೆ (ಎನ್‌ಇಟಿ)ಯಲ್ಲಿ ಹಾಲಿ ಸಾಲಿನಿಂದ ಯೋಗ ವಿಜ್ಞಾನ ವಿಚಾರ ಸೇರ್ಪಡೆಗೊಳಿಸಲಾಗಿತ್ತು. ಭಾನುವಾರ ದೇಶಾದ್ಯಂತ ಪರೀಕ್ಷೆ ನಡೆದಿದ್ದು ಸುಮಾರು 4,500 ಮಂದಿ ಅದೇ ವಿಚಾರದಲ್ಲಿ ಪರೀಕ್ಷೆ ಬರೆದಿದ್ದಾರೆ ಎಂದು ಅದನ್ನು ಆಯೋಜಿಸಿದ ಕೇಂದ್ರೀಯ ಮಾಧ್ಯಮಿಕ ಶಿಕ್ಷಣ ಮಂಡಳಿ (ಸಿಬಿಎಸ್‌ಇ) ಮಂಗಳವಾರ ತಿಳಿಸಿದೆ.

ಕೋಲಾರ ಪತ್ರಿಕೆ



# ಹೊಳಲಿಯಲ್ಲಿ ನಾಳೆ ಉಚಿತ ಆರೋಗ್ಯ ತಪಾಸಣಾ ಶಿಬಿರ

ಕೋಲಾರ ಜ.೨೪

ತಾಲೂಕಿನ ಹೊಳಲಿಯ ಭೀಮಲಿಂಗೇಶ್ವರಸ್ವಾಮಿ ದೇವಾಲಯದ ಆವರಣದಲ್ಲಿ ಇದೇ ೨೬ರಂದು ಗುರುವಾರ ಬೆಳಿಗ್ಗೆ ೯ರಿಂದ ಮಧ್ಯಾಹ್ನ ೨ ಘಂಟೆಯವರೆಗೆ ಟಮಕದ ದೇವರಾಜ ಅರಸು ವೈದ್ಯಕೀಯ ಮಹಾ ವಿದ್ಯಾಲಂಯ, ನಾರಾಯಣ ಹೃದಯಾಲಯಗಳ ಆಶ್ರಯದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ನಡೆಯಲಿದೆ.

ಶಿಬಿರದ ಪ್ರಯೋಜನ ಪಡೆಯಲು ಜಾಲಪ್ಪ ಆಸ್ಪತ್ರೆಯ ಸಾರ್ವಜನಿಕ ಸಂಪರ್ಕ ಅಧಿಕಾರಿ ಡಾ॥ ಎಸ್. ಕೃಷ್ಣಮೂರ್ತಿ, ಎಲ್.ವಿ.ವಿಷ್ಣುಚಿತ್ತರನ್ನು ಸಂಪರ್ಕಿಸಬಹುದಾಗಿದೆ.

ಬೆಂಗಳೂರಿನ ಆರ್‌ಟಿ ನಗರ ರೋಟರಿ ಕ್ಲಬ್ ಮತ್ತು ಆಕಾಶ್ ಪವರ್ ಜೆನ್‌ಸೆಟ್ಸ್‌ನವರು ಶಿಬಿರಕ್ಕೆ ಸಹಯೋಗ ನೀಡಿದ್ದಾರೆ. ಹಲವಾರು ಆಸ್ಪತ್ರೆಗಳ ತಜ್ಞ ವೈದ್ಯರು ತಪಾಸಣೆ ನಡೆಸಿ ಉಚಿತವಾಗಿ ಔಷಧಿಯನ್ನು ನೀಡಲಿದ್ದಾರೆ.